(2)

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU
CITY UNIVERSITY

Central College Campus, Dr. B.R Ambedkar Veedhi,
Bengaluru – 560 001.Ph.No.080-22961016 / 22131385
E-mail: registrar@bcu.ac.in

**ವಿಷಯ:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ "ಜ್ಞಾನಜ್ಯೋತಿ-ಸೆಂಟ್ರಲ್ ಕಾಲೇಜ್ ಆವರಣ"ದಲ್ಲಿರುವ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗಕ್ಕೆ **"BCU School of Management Studies "** ಎಂದು ಮರುನಾಮಕರಣ ಮಾಡುವ ಬಗ್ಗೆ:-

**ಉಲ್ಲೇಖ:** 1.ದಿನಾಂಕ:28.02.2024 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ
2.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.03.2024

*************

ಬೆಂಗಳೂರು ವಿಶ್ವವಿದ್ಯಾನಿಲಯವು 2017ರಲ್ಲಿ ಮೂರು ವಿಶ್ವವಿದ್ಯಾನಿಲಯಗಳಾಗಿ ವಿಭಜನೆಗೊಂಡ ನಂತರ ನಗರದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಅಸ್ತಿತ್ವಕ್ಕೆ ಬಂದಿದೆ. ಇಲ್ಲಿನ ಸ್ನಾತಕೋತ್ತರ ವಿಭಾಗಗಳನ್ನು ಬೆಂಗಳೂರು ವಿಶ್ವವಿದ್ಯಾನಿಲಯವು ಜ್ಞಾನಭಾರತಿ ಆವರಣಕ್ಕೆ ವರ್ಗಾಯಿಸುವ ಸಂದರ್ಭದಲ್ಲಿ ಇಲ್ಲಿ ಸ್ಥಾಪಿಸಲಾಗಿರುವ ಕೆನರಾ ಬ್ಯಾಂಕ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗವನ್ನು ಸಹ ಇದೇ ಹೆಸರಿನಿಂದ ವರ್ಗಾಯಿಸಲಾಗಿದೆ. ನಗರದ ಕೆನರಾಬ್ಯಾಂಕ್ ನವರು ನಿರ್ದಿಷ್ಟ ಮೊತ್ತವನ್ನು ದೇಣಿಗೆಯಾಗಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ಹಿನ್ನಲೆಯಲ್ಲಿ ಈ ವಿಭಾಗಕ್ಕೆ ಕೆನರಾ ಬ್ಯಾಂಕಿನ ಹೆಸರನ್ನು ಸೇರಿಸಿ **"ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್"** ಎಂದು ನಾಮಕರಣ ಮಾಡಲಾಗಿತ್ತು. ಈಗ ಬೆಂಗಳೂರು ವಿಶ್ವವಿದ್ಯಾನಿಲಯವು ಜ್ಞಾನಭಾರತಿಯ ಆವರಣದಲ್ಲಿ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗವನ್ನು "ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್" ಎಂಬ ಹೆಸರಿನಿಂದ ಪ್ರಾರಂಭಿಸಿರುವುದರಿಂದ ಎರಡೂ ಸಂಸ್ಥೆಗಳಲ್ಲಿ ಒಂದೇ ಹೆಸರಿನಿಂದ ಗುರುತಿಸಿರುವುದರಿಂದ ವಿದ್ಯಾರ್ಥಿಗಳಿಗೆ, ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಮತ್ತು ಸೀಟ್ ಹಂಚಿಕೆಯ ವಿಷಯದಲ್ಲಿಯೂ ಸಹ ಕರ್ನಾಟಕ ಸರ್ಕಾರದ ಪರೀಕ್ಷಾ ಪ್ರಾಧಿಕಾರಕ್ಕೂ, AICTE ಮತ್ತು U.G.Cಗಳಲ್ಲಿಯೂ ಮತ್ತು ಮ್ಯಾನೇಜ್‌ಮೆಂಟ್ ಸಂಸ್ಥೆಗಳಿಗೆ ಗೊಂದಲಕ್ಕೀಡು ಮಾಡುತ್ತಿದೆ.

ಈ ಕಾರಣಗಳಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ "ಜ್ಞಾನಜ್ಯೋತಿ-ಸೆಂಟ್ರಲ್ ಕಾಲೇಜಿನ ಆವರಣದಲ್ಲಿ" ತನ್ನ ವ್ಯಾಪ್ತಿಗೆ ಒಳಪಡುವ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗವನ್ನು **"BCU School of Management Studies"** ಎಂದು ಮರು ನಾಮಕರಣ ಮಾಡಲು ದಿನಾಂಕ:28.02.2024ರಂದು ನಡೆದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಈ ಪ್ರಸ್ತಾವನೆಯನ್ನು ಸಿಂಡಿಕೇಟ್ ಸರ್ವಾನುಮತದಿಂದ ಅಂಗೀಕರಿಸಿದೆ. ಅದರಂತೆ ಮಾನ್ಯಕುಲಪತಿಗಳ ಅನುಮೋದನೆ ಮೇರೆಗೆ ಈ ಕೆಳಗಿನಂತೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

**ಪು.ತಿ.ನೋ**

# ಅಧಿಸೂಚನೆ

**ಅಧಿಸೂಚನೆ ಸಂಖ್ಯೆ: ಬೆಂ.ನ.ವಿ/ಕು.ಕ/ಸಿಬಿಎಸ್ಎಂಎಸ್/ಬಿಸಿಯು ಎಸ್.ಎಂ.ಎಸ್/01/2023-24**

**ದಿನಾಂಕ:21.03.2024**

ಸಿಂಡಿಕೇಟ್ ಅನುಮೋದನೆಯ ಮೇರೆಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ **"ಜ್ಞಾನಜ್ಯೋತಿ-ಸೆಂಟ್ರಲ್ ಕಾಲೇಜಿನ ಆವರಣ"**ದಲ್ಲಿರುವ ಈ ಹಿಂದೆ ಬೆಂಗಳೂರು ವಿಶ್ವವಿದ್ಯಾನಿಲಯ ಸ್ಥಾಪಿಸಿದ್ದ **"ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್"**ನ ಹೆಸರನ್ನು **"BCU School of Management Studies"** ಎಂದು ಮರುನಾಮಕರಣ ಮಾಡಲಾಗಿದೆ. ಇನ್ನು ಮುಂದೆ "ಜ್ಞಾನಜ್ಯೋತಿ-ಸೆಂಟ್ರಲ್ ಕಾಲೇಜ್ ಆವರಣ"ದಲ್ಲಿರುವ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗವನ್ನು **"ಬಿಸಿಯು ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್"("BCU School of Management Studies")** ಎಂದು ನಾಮಕರಣ ಮಾಡಲಾಗಿದೆ.

ಆದೇಶದ ಮೇರೆಗೆ

ಕುಲಸಚಿವರು(ಆ)

ಗೆ,

1. ವಿಶ್ವವಿದ್ಯಾನಿಲಯದ ಎಲ್ಲಾ ಪ್ರಾಧಿಕಾರದ ಸದಸ್ಯರುಗಳಿಗೆ
2. ವಿಶ್ವವಿದ್ಯಾನಿಲಯದ ಎಲ್ಲಾ ಡೀನರು/ವಿಭಾಗಗಳ ಮುಖ್ಯಸ್ಥರುಗಳಿಗೆ
3. ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ

ಪ್ರತಿ:-

1. ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ(ತಾಂತ್ರಿಕ) ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಉಪ-ಕಾರ್ಯದರ್ಶಿಗಳು, ಉನ್ನತ ಶಿಕ್ಷಣ(ವಿಶ್ವವಿದ್ಯಾನಿಲಯಗಳು)ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ.
7. ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾರುಗಳಿಗೆ.
8. ಎಲ್ಲಾ ಪತ್ರಿಕಾ ಮಾಧ್ಯಮಗಳ ಸಂಪಾದಕರು (ವರದಿಗಾರರಿಗೆ)
9. ವಿಶ್ವವಿದ್ಯಾನಿಲಯದ ವೆಬ್-ಸೈಟ್‌ನಲ್ಲಿ ದಾಖಲಿಸಲು ಸಂಬಂಧಪಟ್ಟವರಿಗೆ.

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ
BENGALURU
CITY UNIVERSITY

# BENGALURU CITY UNIVERSITY

(Affiliating State University)

Sub: Renaming of the 'Canara Bank School of Management Studies' as **"BCU School of Management Studies".**

Ref: 1. Resolution of the Syndicate Meeting held on 28.02.2024
2. Approval of the Vice-Chancellor dated.20.03.2024

***PREAMBLE:***

After trifurcation of Bangalore University in the year 2017, Bengaluru City University was established at the Central Campus Premises. In the year 1999, the Department of Management Studies was renamed by Bangalore University as "CANARA BANK SCHOOL OF MANAGEMENT STUDIES" in view of the grant of endowment by Canara Bank. The Bangalore University has shifted all the Postgraduate Departments located in the Central College by starting identical courses in Jnana Bharathi Campus including "CANARA BANK SCHOOL OF MANAGEMENT STUDIES" by the same name. As a result both the Universities have started using the same name, causing confusion among students, AICTE, and general public. most importantly in finalising seat matrix announced by Karnataka Examination Authority. As a result, the students are experiencing confusion while selecting the seats, because of identical nomenclature.

In view of the above situation, a proposal was placed before the Syndicate meeting held on 28.02.2024 proposeing for dispensing the use of the name of "CANARA BANK SCHOOL OF MANAGEMENT STUDIES" and to rename it as as "BCU SCHOOL OF MANAGEMENT STUDIES". The Syndicate has unanimously accepted the proposal accordingly Hon'ble Vice-Chancellor has approved for issue of following notification.

## NOTIFICATION

**No. BCU/RPS/Estate/CBSMS/01 /2023-24** **Date: 21.3.2024**

Consequent upon the decision of the Syndicate and with the Approval of the Vice-Chancellor, the name of the "Canara Bank School of Management Studies" located in the "Jnanajyothi - Central College Campus" offering Management Studies courses under Bengaluru City University is renamed as "BCU SCHOOL OF MANAGEMENT STUDIES" with immediate effect.

BY Order

REGISTRAR

To.

1. All the Members of the University Authorities.
2. The Registrar (Evaluation), BCU

*p.t.o*